ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಗುರುವಾರ, ದಿನಾಂಕ : 10 ನೇ ಡಿಸೆಂಬರ್, 2020

ಬೀದರ್ ಜಿಲ್ಲೆಯ ಪ್ರವಾಸೋದ್ಯಮದಲ್ಲಿ ರೂ.270.00 ಲಕ್ಷಗಳ ಅನುದಾನ ಕುರಿತು

ಶ್ರೀ ಅರವಿಂದ ಕುಮಾರ್ ಅರಳಿ(ವಿಧಾನಸಭೆಯಿಂದ ಚುನಾಯಿತರಾದವರು) –

266 (497) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೀದರ್ ನಗರದ ವ್ಯಾಪ್ತಿಯಲ್ಲಿ ಬರುವ ಶಿಕಾರಗ ಮತ್ತು ಕರೇಜ್ ಪುನರುತ್ಥಾನ, ಕರೇಜ್‌ದಲ್ಲಿ ಹೂಳು ತೆಗೆಯುವುದು, ಸುತ್ತುಗೋಡೆ, ನೀರು ಶುದ್ಧೀಕರಣ, ಉದ್ಯಾನವನ ಹಾಗೂ ಪ್ರವಾಸಿಗರಿಗೆ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಯನ್ನು ರೂ. 270.00 ಲಕ್ಷಗಳಲ್ಲಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆಯೇ;

(ಆ) ಇದಕ್ಕಾಗಿ ಎರಡು ಬಾರಿ ಟೆಂಡರ್ ಕರೆಯಲಾಗಿದ್ದು, ಎರಡು ಟೆಂಡರ್‌ಗಳಲ್ಲಿಯೂ ಅರ್ಹ ಗುತ್ತಿಗೆದಾರರು ಆಯ್ಕೆಯಾಗಿರುವುದಿಲ್ಲವೇ; ಸದರಿ ಕಾಮಗಾರಿಯನ್ನು ಪ್ರಾರಂಭಿಸದಿರುವುದರಿಂದ ಅವುಗಳನ್ನು ರದ್ದುಪಡಿಸಲು ಆದೇಶಿಸಿರುವುದು ನಿಜವೇ; ಹಾಗಿದ್ದಲ್ಲಿ, ಮಂಜೂರಾದ ರೂ. 2.70 ಕೋಟಿ ಹಣವನ್ನು ಯಾವ ಕಾಮಗಾರಿಗೆ ಉಪಯೋಗಿಸಲ್ಪಟ್ಟಿದೆ; (ಸಮಗ್ರ ಮಾಹಿತಿ ಒದಗಿಸುವುದು)

(ಇ) ಬೀದರ್, ಕಲಬುರಗಿ ಹಾಗೂ ವಿಜಯಪುರದಲ್ಲಿರುವ ಸ್ಮಾರಕ ಮತ್ತು ಕೋಟೆಗಳನ್ನು ಒಳಗೊಂಡಂತೆ ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಮಂತ್ರಾಲಯದಿಂದ ಯುನೆಸ್ಕೋ ಅಂಗ ಸಂಸ್ಥೆಗೆ ಸಲ್ಲಿಸಲಾದ ಸೈಟ್ ಮ್ಯಾನೇಜ್‌ಮೆಂಟ್ ಮತ್ತು ಡೋಸಿಯರ್ ಯಾವ ಹಂತಕ್ಕೆ ಬಂದಿದೆ; (ಪ್ರತಿಯನ್ನು ಒದಗಿಸುವುದು)

(ಈ) 2015-2016ನೇ ಸಾಲಿನಲ್ಲಿ ಕೇಂದ್ರದ HRIDAY (ಹೆರಿಟೇಜ್ ಸಿಟಿ ಡೆವಲಪ್ಮೆಂಟ್ ಅಂಡ್ ಆಗುಮೆಂಟೇಷನ್ ಯೋಜನೆ) ಅಡಿಯಲ್ಲಿ ಸಲ್ಲಿಸಲಾದ ಪ್ರಸ್ತಾವನೆಯ ಬಗ್ಗೆ ಸರ್ಕಾರ ಯಾವ ಕ್ರಮಕೈಗೊಂಡಿದೆ; (ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)

(ಉ) ಬೀದರ್‌ನ ಗೋರನಳ್ಳಿ ಗ್ರಾಮ ನೌಬಾದನಲ್ಲಿರುವ ಕೆರೆಗಳ ಅತಿಕ್ರಮಣ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ; ಈ ಕೆರೆಗಳಿಗೆ ನೀರು ಪೂರೈಸುವ ಹಳ್ಳಗಳ (ಫಸ್ಟ್ ಆರ್ಡರ್ ಸ್ಟ್ರೀಮ್ಸ್) ಮಾಹಿತಿ ಇದೆಯೇ; ಇದ್ದಲ್ಲಿ, ಈ ಕೆರೆಗಳ ಸಂರಕ್ಷಣೆಗಾಗಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? (ಮಾಹಿತಿ ಒದಗಿಸುವುದು)